CLAUSE 1, ETC.,

MR. DEPUTY SPEAKER — The question is:

"That Clause 1, the long Title the Preamble, and the Enacting Formula, do stand part of the Bill"

The Motion was adopted

Clause 1. the Preamble, the Long Title and the Enacting Formula were added to the Bill.

Motion to Pass

SRI K. H. RANGANATH.— I beg to move:

"That the Karnataka Co-operative Societies (Third Amendment) Bill, 1976 be passed."

MR. DEPUTY SPEAKER — The question is:

"That the Karnataka Co-operative Societies (Third Amendment) Bill, 1976 be passed."

The Motion was adopted and the Bill was passed

ಶ್ರೀ ಎನ್. ಹುಚ್ಚಮಾಸ್ತಿಗೌಡ ಕಂದಾಯ ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೇ, ಲೆಜಿಸ್ಲೇಟಿವ್ ಕೌನ್ಸಿಲ್‌ನಿಂದ ಬಂದಿರುತಕ್ಕ ಥಾ 3 ಮಸೂದೆಗಳು ಏನು ಇವೆ ಅವನ್ನು ದಯವಾಡಿ ಇಲ್ಲಿ ತೆಗೆದುಕೊಳ್ಳುವುದಕ್ಕೆ ಅಪ್ಪಣೆ ಕೊಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಮತ್ತು ತಮ್ಮ ಮೂಲಕ ಈ ಸಭೆಯ ಸದಸ್ಯರಿಗೆ ಕೇಳಿಕೊಳ್ಳುವುದು ಏನೆಂದರೆ ಈ 3 ಮಸೂದೆಯನ್ನು ತಗೆದುಕೊಳ್ಳುವುದಕ್ಕೆ 15-20 ನಿಮಿಷ ಹೆಚ್ಚು ಹೊತ್ತು ಕೂತುಕೊಂಡು ಅದನ್ನು ಪಾಸ್ ಮಾಡಿ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

MR. DEPUTY SPEAKER.— Infact I was expecting this request earlier.

KARNATAKA PUBLIC MONEYS (RECOVERY OF DUES) BILL, 1976 AS PASSED BY THE LEGISLATIVE COUNCIL

SRI N. HUICHAMASTHY GOWDA (Minister for Revenue).— Sir I beg to move:

"That the Karnataka Public Moneys (Recovery of Dues) Bill, 1976, as passed by the Legislative Council, be taken into consideration."

MR. DEPUTY SPEAKER.— Motion moved:

"That the Karnataka Public Moneys (Recovery of Dues) Bill, 1976, as passed by the Legislative Council, be taken into consideration."

†ಶ್ರೀ ಎನ್. ಹುಚ್ಚಮಾಸ್ತಿಗೌಡ —ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆಯ ಮುಖ್ಯ ಉದ್ದೇಶ ಏನೆಂದರೆ ಕಾರ್ಪೊರೇಷನ್ಸ್ ಮತ್ತು ಬ್ಯಾಂಕ್ಸ್ ಕೊಟ್ಟಂಥಾ ಸಾಲವನ್ನು ವಾಪಸು ಪಡೆಯಬೇಕಾದರೆ ಈಗ ಕೋರ್ಟ್‌ಗೆ ಹೋಗಿ ಸಿವಿಲ್ ಸೂಟ್ ಹಾಕಿ ಬಾಕಿಯನ್ನು ವಸೂಲಾಮಾಡ ತಕ್ಕಂಥಾ ಸಂದರ್ಭ ಇವೆ. ಇದನ್ನು ತಪ್ಪಿಸುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ನಮ್ಮಲ್ಲಿ ಇತ್ತೀಚೆಗೆ ಸಾಮಾಜಿಕ ಸುಧಾರಣೆಗೆ ಸಂಬಂಧಪಟ್ಟಂತೆ ಕೆಲವು ಕಾರ್ಯಕ್ರಮಗಳಿಗೆ ಈ ಸ್ಯಾಷನಲೈಸ್ಡ್ ಬ್ಯಾಂಕ್ಸ್ ಮತ್ತು ಕಾರ್ಪೊರೇಷನ್ಸ್ ಸುಲಭೋಪಾಯದಲ್ಲಿ ಅವರುಗಳಿದ ಸಾಲಗಳನ್ನು ಒದಗಿಸಿಕೊಟ್ಟು ಅದನ್ನು ಬೇಗ ವಸೂಲಾಮಾಡುವುದಕ್ಕೆ ಅವಕಾಶ ಇರುವ ಹಾಗೆ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಪ್ರಕಾರ ವಸೂಲಾಮಾಡುವ ಹಾಗೆ ಸರ್ಕಾರವೇ ಈ ರೀತಿಯಾಗಿ ಒಂದು ಅವಕಾಶ ಕಲ್ಪಿಸಬೇಕು ಎನ್ನುವುದೇ ಇದರ ಮುಖ್ಯ ಉದ್ದೇಶ. ಈ ರಾಗಲೇ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಸಾಲಗಳನ್ನು ಕೊಡುವುದಕ್ಕೋಸ್ಕರ ಅಗ್ರಿಕಲ್‌ಚರ್ ಕ್ರೆಡಿಟ್ ಮಿನ್‌ಲೇನಿಯಸ್ಸ್ ಪ್ರಾವಿಷನ್ ಆಕ್ಟ್ ಪ್ರಕಾರ ಆ ಅರಿಯರ್ಸ್ ಅನ್ನು ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಅರಿಯರ್ಸ್ ವಸೂಲಾಮಾಡುವುದಕ್ಕೆ ಹೇಗೆ ಅವಕಾಶ ಇದೆಯೊ ಅದೇರೀತಿ ಇದಕ್ಕೂ ಇರಬೇಕು ಅನ್ನುವ ಉದ್ದೇಶದಿಂದ ಈ ಒಂದು ವಿಧೇಯಕವನ್ನು ತಂದಿದ್ದೇವೆ. ದಯವಿಟ್ಟು ಈ ಮಸೂದೆಯನ್ನು ಸಭೆ ಪಾಸ್ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಬಗ್ಗೆ ನನ್ನ ಒಂದೆರಡು ಕ್ಲಾರಿಫಿಕೇಷನ್ ಇಷ್ಟೆ. ಸಂಬಂಧಪಟ್ಟ ಬ್ಯಾಂಕ್‌ನವರು ಕೊಟ್ಟ ಒಂದು ಸ್ಟೇಟ್‌ಮೆಂಟ್ ಆಧಾರದ ಮೇಲೆ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಅಂತ ಕರೆಕ್ಟ್ ಮಾಡಬೇಕು ಅಂತ ಇದೆ. ಹಿಂದೆ ಒಂದು ಸಂದರ್ಭದಲ್ಲಿ ಮಾತನಾಡುವಾಗ ಲ್ಯಾಂಡ್ ರಿವಿನ್ಯೂಸ್ ಬಗ್ಗೆ ಮಾತನಾಡುವಾಗ ಅದರಲ್ಲಿ ಒಂದು ಪ್ರಿನ್ಸಿಪಲ್ ಇದೆ. ಅದರಲ್ಲಿ ಈ ರೀತಿ ಇದೆ —"After giving an opportunity or after being heard" ಅನ್ನುವ ಒಂದು ಪದವನ್ನು ಸೇರಿಸಿದ್ದೀರಿ. ಡೆಪ್ಯೂಟಿ ಕಮೀಷನರಿಗೆ ಅವರು ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಕೊಡುವ ಮೊದಲು ಈತನಿಗೆ ಒಂದು ಅವಕಾಶ ಕೊಟ್ಟರೆ ಒಳ್ಳೆಯದು. ಏತಕ್ಕೆಂದರೆ ಅನೇಕ ಸಾರಿ ಏನಾಗುತ್ತದೆ ಎಂದರೆ ಆ ರೆಡ್ಡರ್‌ನಲ್ಲಿ ಅವನ ಅಕೌಂಟ್ಸ್‌ಗೆ ಡೆಬಿಟ್ಸ್‌ಗೇ ಇರುವುದಿಲ್ಲ, ಈ ರೀತಿಯಾದ ಒಂದು ಡಿಸಪ್ಯೂಟ್ ಇರುತ್ತದೆ, ಅಲ್ಲದೆ ಒಂದೊಂದು ಸಾರಿ ಫೋರ್ಜರಿಯೂ ಕೂಡ ಆಗಿರುತ್ತದೆ. ಆದುದರಿಂದ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಅವರಿಗೆ ಕಳುಹಿಸುವ ಮೊದಲು ಈತನಿಗೂ ಇನ್ನೊಂದು ಅವಕಾಶ ಇರುವಂತೆ ಪ್ರಾವಿಷನ್ ಮಾಡುವುದು ಇದರಲ್ಲಿ ಸೂಕ್ತ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—The Karnataka Agriculture operations and Miscellaneous Act, 1974 ರ ಪ್ರಕಾರ ಅರಿಯರ್ಸ್ ಇದ್ದರೆ ಅದನ್ನು ಲ್ಯಾಂಡ್‌ರೆವಿನ್ಯೂ ಮುಖಾಂತರ ವಸೂಲಾಮಾಡ ಬಹುದು ಅಂತ ಇದೆ, ಹಾಗಿರುವಾಗ ಮತ್ತೆ ಇದನ್ನು ಈಗ ಒತ್ತಾಯ ಮಾಡಬೇಕಾದ ಅವಶ್ಯಕತೆ ಏನು ಇದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅಗ್ರಿಕಲ್‌ಚರ್ ಪರ್ಪಸ್‌ಗೆ ಸಾಲ ಕೊಡುವ ಸಂದರ್ಭದಲ್ಲಿ ಮಾತ್ರ ಅದು ಅನ್ವಯಿಸುತ್ತದೆ. ಬಾಕಿ ಸಂದರ್ಭದಲ್ಲಿ ಅದು ಅನ್ವಯಿಸುವುದಿಲ್ಲ. ಆದುದರಿಂದ ಈಗ ನಾವು ನಾನಾ ತರಹವಾದ ಕೆಲಸಗಳನ್ನು ಮಾಡಬೇಕಾಗಿರುವುದರಿಂದ ಸಾಮಾಜಿಕ ಸುಧಾರಣೆಗೆ ಸಂಬಂಧಪಟ್ಟಂತೆ ಅನೇಕ ಕಾಯಿದೆಗಳನ್ನು ತರಬೇಕಾಗುತ್ತದೆ. ಉದಾಹರಣೆ ಜೀತ ಪದ್ಧತಿಗೆ ಸಂಬಂಧಪಟ್ಟಂತೆ ಯಾವುದಾದರು ಸಾಲ ವಸೂಲಾಮಾಡುವುದಕ್ಕೋಸ್ಕರವಾಗಲಿ, ಅಥವಾ ದುರ್ಭಿಕ್ಷ ಬಂದ ಕಾಲದಲ್ಲಿ ವಸೂಲಾಮಾಡುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಆ ಸಾಲ ಅಗ್ರಿಕಲ್‌ಚರ್ ಪರ್ಪಸ್‌ಗೆ ಇಲ್ಲದಿದ್ದರೂ ಕೂಡ ಇದು ಅನ್ವಯಿಸುತ್ತದೆ. ಉದಾಹರಣೆಗೆ ವ್ಯವಸಾಯಗಾರರಿಗೆ ಹುಲ್ಲು ಕೊಂಡುಕೊಳ್ಳುವುದಕ್ಕಾಗಲಿ ಅಥವಾ ಧಾನ್ಯವನ್ನು ಕೊಂಡು ಕೊಳ್ಳುವುದಕ್ಕಾಗಲಿ ಕೆಲವು ಸಂದರ್ಭದಲ್ಲಿ ಹಣ ಸಾಕಾಗುವುದಿಲ್ಲ. ಆ ಸಂದರ್ಭದಲ್ಲಿ ನ್ಯಾಷನಲೈಸ್ಡ್ ಬ್ಯಾಂಕ್‌ನವರಾಗಲಿ ಅಥವಾ ಕಾರ್ಪೊರೇಷನ್‌ನವರಾಗಲಿ ಅವರಿಗೆ ಹಣ ಕೊಟ್ಟಿದ್ದರೆ ಅದನ್ನು ನಾವು ಜವಾಬ್ದಾರಿಯಿಂದ ವಸೂಲಾಮಾಡುವುದಕ್ಕೆ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಪ್ರಕಾರ ಅವರಿಂದ ವಸೂಲಾಮಾಡುವುದಕ್ಕೆ ಜವಾಬ್ದಾರಿ ತೆಗೆದುಕೊಂಡರೆ ಅವರಿಗೆ ಸಾಲ

ಸುಲಭವಾಗಿ ಸಿಕ್ಕುತ್ತದೆ ಎನ್ನುವುದೇ ಇದರ ಮೂಲ ಉದ್ದೇಶ. ನಾನು ಈಗಾಗಲೇ ಬ್ಯಾಂಕ್ ನವರನ್ನು ಕರೆದು, ನಮ್ಮ ಮುಖ್ಯಮಂತ್ರಿಗಳೂ ಕೂಡ ಅವರ ಜೊತೆಯಲ್ಲಿ ನವಾಲೋಚನೆ ಮಾಡಿದ್ದಾರೆ.

ಮಾನ್ಯ ಸದಸ್ಯರು ಇನ್ನೊಂದು ವಿಚಾರ ಹೇಳಿದರು. ಅದು ಏನೆಂದರೆ ಅವನಿಗೆ ನೋಟೀಸ್ ಕೊಟ್ಟರೂ ಕೂಡ ಅದೇ ಫೈನರ್ ಎಂದು ತಿಳಿದು ವನೂರ್ಮಾಡುವುದಕ್ಕೆ ಅವಕಾಶ ಆಗಬೇಕು ಎಂದು, ಇದನು ರೂಲ್‌ನಲ್ಲಿ ನರಿಪಡಿಸುವುದಕ್ಕೆ ಸಾಧ್ಯ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದಿನ ಆಕ್ಟ್‌ನಲ್ಲಿ ಇದನ್ನು ಸೇರಿಸಿದ್ದೀರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಈ ವಿಷಯ ರಿಜಿಸ್ಟ್ರೇಷರ್ ಕಾನ್ಸಿರ್‌ನಲ್ಲಿ ಬಂದಿತ್ತು. "after giving an opportun ty" or "after being heard" ಅನ್ನುವ ಪದ ಸೇರಿನದೇ ಇದ್ದರೂ ಕೂಡ ರೂರ್‌ನಲ್ಲಿ ಇದನ್ನು ಸೇರಿಸುವುದಕ್ಕೆ ಸಾಧ್ಯವೇ ಅನ್ನುವ ವಿಷಯದಲ್ಲಿ ಹೇಳುವುದಾದರೆ ಒಂದು ವೇಳೆ ಇದನ್ನು ರೂಲ್‌ನಲ್ಲಿ ಸೇರಿಸದೇ ಇದ್ದರೂ ಕೂಡ ಅವನಿಗೆ ನೋಟೀಸ್ ಕಳುಹಿಸುವುದಕ್ಕಿಂತ ಮುಂಚಿತವಾಗಿ ಅಥವಾ ಕಳುಹಿಸಿದ ಮೇಲಾದರೂ ಬ್ಯಾಂಕ್‌ನಲ್ಲಿ ರೆಫರ್ ಮಾಡಿ ಇದನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯ ಇದೆ ಎಂದು ನನಗೆ ತಿಳಿದು ಬಂತು. ಆಗ ನಮಗೆ ಏನೂ ತೊಂದರೆ ಆಗಲಾರದು ಎನ್ನುವುದು ನನ್ನ ನಂಬಿಕೆ.

MR. DEPUTY SPEAKER.—The question is :

"That the Karnataka Public Moneys (Recovery of Dues) Bill, 1976, as passed by the Legislative Council, be taken into consideration"

The Motion was adopted

CLAUSES 2 TO 5

MR. DEPUTY SPEAKER.—The question is.

"That Clauses 2 to 5, both inclusive, do stand part of the Bill."

The Motion was adopted

"Clauses 2 to 5, both inclusive, were added to the Bill."

CLAUSE 1 etc.,

MR. DEPUTY SPEAKER.—The question is.

"That clause 1, the Long Title, the Preamble and the Enacting Formula do stand part of the Bill."

The Motion was adopted

Clause 1, the Long title the Preamble, and the Enacting Formula were added to the Bill.

Motion to pass

SRI N. HUTCHAMASTHY GOWDA.—Sir, I beg to move :

"That the Karnataka Public Moneys (Recovery of Due) Bills 1976 as passed by the Legislative Council, be passed."

MR. DEPUTY SPEAKER.—The question is :

"That the Karnataka Public Moneys (Recovery of Due) Bill 1976 as passed by the Legislative Council be passed."

The Motion was adopted and the Bill was passed

THE KARNATAKA LAND REFORMS (FOURTH AMENDMENT) BILL 1976 AS PASSED BY THE LEGISLATIVE COUNCIL

Motion to consider

SRI N. HUTCHAMASTHY GOWDA (Minister for Revenue) —Sir I beg to move :

"That the Karnataka Land Reforms (Fourth Amendment) Bill, 1976 as passed by the Legislative Council be taken into consideration"

MR. DEPUTY SPEAKER.—Motion moved :

"That the Karnataka Land Reforms (Fourth Amendment) Bill 1976 as passed by the Legislative Council be taken into consideration."

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಉಪಾಧ್ಯಕ್ಷರೇ ಈ ಭೂಸುಧಾರಣೆ ಕಾಯಿದೆಗೆ ಒಂದು ನಣ ತಿದ್ದುಪಡಿ ಅವಶ್ಯಕವಾಗಿತ್ತು. ಅದು ಯಾವುದಂದರೆ ಗೇಣಿದಾರರು ಅವರ ಅರ್ಜಿಗಳನ್ನು ಸಲ್ಲಿಸತಕ್ಕಂಥಾ ವಾಯಿದೆ ಇನ್ನೂ ಸ್ವಲ್ಪ ಹೆಚ್ಚು ಮಾಡಬೇಕು ಅನ್ನುವ ಅಭಿಪ್ರಾಯ ಇತ್ತು ದರಿಂದ ಅದನ್ನು 1976ನೇ ಇಸವಿ ಡಿಶಂಬರ್ 31ರವರೆಗೆ ಹೆಚ್ಚು ಮಾಡಿದೆ. ಅವರ ಬಗ್ಗೆ ಅನೇಕರು ಅರ್ಜಿಗಳನ್ನು ಹಾಕಿಕೊಳ್ಳತಕ್ಕಂಥಾದ್ದು ಅವಶ್ಯಕವಾಗಿತ್ತು. ಆದರಂತೆ ಎಷ್ಟೋ ಜನ ಅರ್ಜಿಗಳನ್ನು ಈಗಾಗಲೇ ಹಾಕಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಡಿಶಂಬರ್ ಆದ ಮೇಲೆ ಮತ್ತೆ ಇದನ್ನು ಹೆಚ್ಚಿಸಲು ಇನ್ನೊಂದು ಆರ್ಡಿನೆನ್ಸ್ ತರುವ ಬದಲು ಈಗಲೇ ಒಂದುಸಾರಿ ಇದನ್ನು ಬಡ್ಜೆಟ್ ಸೆಶನ್ ವರೆಗೂ ಹೆಚ್ಚಿಸುವುದು ಒಳ್ಳೆಯದಲ್ಲವೇ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರ ಅಭಿಪ್ರಾಯ ಹಾಗೆ ಇರಬಹುದು. ಆದರೆ ಸ್ಥಳಿಯ ವಿದ್ಯಮಾನಗಳನ್ನು ತಿಳಿದುಕೊಂಡು ಈ ಕಾಲವನ್ನು ಹೆಚ್ಚಿಸಿದ್ದೇನೆ. ಈಗಾಗಲೇ ಕೆಲವು ನ್ಯಾಯವಾಗಿ ಇಲ್ಲದೇ ಇರತಕ್ಕಂಥಾವು, ವಾಸ್ತವವಾಗಿ ಗೇಣಿ ಮಾಡದೇ ಇರತಕ್ಕಂಥಾವರು ಅರ್ಜಿ ಕೊಡುವುದು ಕಾಣುಬರುತ್ತಾ ಇಲ್ಲ. ಯಾರು ಗೇಣಿದಾರರನ್ನು ಹೆದರಿಸಿ, ಬೆದರಿಸಿ ಇರುತ್ತಾರೋ ಅಂಥಾವರು ಇನ್ನೂ ಅರ್ಜಿ ಹಾಕದೇ ಇರತಕ್ಕಂಥಾವರಿಗೆ ಅವರು ಅರ್ಜಿ ಹಾಕಿಕೊಳ್ಳುವದಕ್ಕೆ ಈ ಕಾಲಮಿತಿಯನ್ನು ಹೆಚ್ಚಿಸಿದ್ದೇವೆ. ಇನ್ನು ಇದನ್ನು ಹೆಚ್ಚಿಸಬೇಕಾದಂಥಾ ಸಂದರ್ಭ ಕಾಣಬರುವುದಿಲ್ಲ, ಸಾಕು ಸರ್ಕಾರದ ಅಭಿಪ್ರಾಯ ಇಲ್ಲಿಯವರೆಗೆ ಏನು ಒಂದು ಕಾಲ ಮಿತಿಯನ್ನು ಹೆಚ್ಚು ಮಾಡಿದ್ದೇವೋ ಅಷ್ಟೇ ಸಾಕು ಎಂದು ಅನಿಸುತ್ತದೆ. ಆದುದರಿಂದ ಇದಕ್ಕೆ ಈ ಮಾನ್ಯ ಸಭೆ ಒಪ್ಪಿಗೆ ಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ನಾನು ಹೇಳುವುದು ಏನೆಂದರೆ ಯಾವನಾದರೂ ಬಡವ ಬಗ್ಗದವನು, ಗೊತ್ತಿಲ್ಲದೆ ಇರುವವರು ಇದ್ದರೆ. ಅವನು ಹೈಕ್ಕಿ ಮಾಡಿದರೆ, ಲಮಿಟೇಷನ್ ಆದ ಮೇಲೆ ಏನಾದರೂ ಅರ್ಜಿ ಹಾಕಿದರೆ ಆವಾಗ ಅದನ್ನು ಏನು ಮಾಡಬೇಕು ಅನ್ನುವುದನ್ನು ನೀವು ಇನ್ನೂ ಆಲೋಚನೆ ಮಾಡಿಲ್ಲ. ಇದನ್ನು ಹೇಳುವಷ್ಟು ಸುಲಭವಲ್ಲ. ನೀವೇನೋ ಸಾಕಾಗಬಹುದು ಎಂದು ಹೇಳುತ್ತೀರಿ. ಈಗ ಯಾವನಾದರೂ ಒಬ್ಬ ರೈತನನ್ನು ಹೆದರಿಸಿ